KAS Mains General Studies Paper-1
07-05-2025

**SUBJECT CODE : 645**

**2025**

# General Studies-1 (Paper-II)

**Time : 3 Hours** | **Maximum Marks : 250**

# ಸಾಮಾನ್ಯ ಅಧ್ಯಯನ-1 (ಪತ್ರಿಕೆ-II)

**ಸಮಯ : 3 ಗಂಟೆಗಳು** | **ಗರಿಷ್ಠ ಅಂಕಗಳು : 250**

## SPECIFIC INSTRUCTIONS

## ನಿರ್ದಿಷ್ಟ ಸೂಚನೆಗಳು

SHIKARAT.COM

*(i)* *Candidates have to attempt all questions.*

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು.

*(ii)* *Marks carried by each question are indicated at its end.*

ಪ್ರತಿ ಪ್ರಶ್ನೆಯ ಕೊನೆಯಲ್ಲಿ ಅದಕ್ಕೆ ನೀಡಲಾಗುವ ಅಂಕಗಳನ್ನು ನಮೂದಿಸಲಾಗಿದೆ.

1. How did the idea of a casteless society develop in 19th and 20th-century in India, and how did reformers address caste discrimination ? (Not more than **150** words)

   19 ಮತ್ತು 20 ನೇ ಶತಮಾನದಲ್ಲಿ ಭಾರತದಲ್ಲಿ ಜಾತಿರಹಿತ ಸಮಾಜದ ಬೆಳವಣಿಗೆಯ ಕಲ್ಪನೆ ಹೇಗೆ ರೂಪಿತಗೊಂಡಿತು ಮತ್ತು ಸಮಾಜ ಸುಧಾರಕರು ಈ ಜಾತಿ ತಾರತಮ್ಯವನ್ನು ಹೇಗೆ ನಿರ್ವಹಿಸಿದರು ? (**150** ಪದಗಳಿಗೆ ಮೀರದಂತೆ ಉತ್ತರಿಸಿ) *10*

2. Discuss the pre-Gandhian and Gandhian phases of Karnataka's role in the national freedom movement. (Not more than **150** words)

   ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧಿ ಪೂರ್ವ ಮತ್ತು ಗಾಂಧಿ ಕಾಲದ ಕರ್ನಾಟಕದ ಪಾತ್ರವನ್ನು ಚರ್ಚಿಸಿ. (**150** ಪದಗಳಿಗೆ ಮೀರದಂತೆ ಉತ್ತರಿಸಿ) *10*

3. Discuss the evolution of Kannada as the literary and administrative language from the Kadamba period to the Vijayanagara period. (Not more than **250** words)

   ಕದಂಬರ ಕಾಲದಿಂದ ವಿಜಯನಗರ ಕಾಲದವರೆಗೆ ಕನ್ನಡವು ಒಂದು ಸಾಹಿತ್ಯಿಕ ಹಾಗೂ ಆಡಳಿತ ಭಾಷೆಯಾಗಿ ವಿಕಸನವನ್ನು ಹೊಂದಿದ ಕುರಿತು ಚರ್ಚಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*



www.shikarat.com

**4.** Analyze the contributions of Karnataka's women freedom fighters and their impact on the National Freedom Movement. Discuss how their efforts shaped both regional and national resistance against British rule. (Not more than **250** words)

ಕರ್ನಾಟಕದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆಗಳನ್ನು ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಮೇಲೆ ಅವರ ಪ್ರಭಾವವನ್ನು ವಿಶ್ಲೇಷಿಸಿ. ಅವರ ಪ್ರಯತ್ನಗಳು ಹೇಗೆ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರತಿರೋಧ ರೂಪಿತವಾಗಲು ಕಾರಣವಾಯಿತು. ಚರ್ಚಿಸಿರಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*

**5.** Analyze the architectural features of the Hoysala temples with special reference to UNESCO recognised Belur Chennakeshava Temple. Discuss its impact on heritage conservation in Karnataka. (Not more than **250** words)

ಯುನೆಸ್ಕೋ (UNESCO) ಮಾನ್ಯತೆಪಡೆದ ಬೇಲೂರು ಚೆನ್ನಕೇಶವ ದೇವಾಲಯವನ್ನು ವಿಶೇಷವಾಗಿ ಉಲ್ಲೇಖಿಸಿ ಹೊಯ್ಸಳರ ದೇವಾಲಯಗಳ ವಾಸ್ತುಶಿಲ್ಪೀಯ ಲಕ್ಷಣಗಳನ್ನು ಪರಿಶೀಲಿಸಿರಿ. ಮತ್ತು ಕರ್ನಾಟಕದ ಪರಂಪರೆಯ ರಕ್ಷಣೆಯಲ್ಲಿ ಅದರ ಪ್ರಭಾವವನ್ನು ಚರ್ಚಿಸಿರಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*

**6.** Examine the trade relations between South India and the Roman Empire and discuss key trade routes, goods exchanged, and cultural influences. (Not more than **150** words)

ದಕ್ಷಿಣ ಭಾರತ ಮತ್ತು ರೋಮನ್ ಸಾಮ್ರಾಜ್ಯದ ನಡುವಿನ ವ್ಯಾಪಾರಿಕ ಸಂಬಂಧಗಳನ್ನು ಪರೀಕ್ಷಿಸಿರಿ ಮತ್ತು ವ್ಯಾಪಾರ ಮಾರ್ಗಗಳು, ವಸ್ತುಗಳ ವಿಲೇವಾರಿ ಹಾಗೂ ಸಾಂಸ್ಕೃತಿಕ ಪ್ರಭಾವಗಳ ಕುರಿತು ಚರ್ಚಿಸಿರಿ. (**150** ಪದಗಳಿಗೆ ಮೀರದಂತೆ ಉತ್ತರಿಸಿ) *10*

**7.** Examine how socialist ideology and Jayaprakash Narayan's concept of 'Total Revolution' aimed to transform Indian society and analyze its impact on social justice and political reforms. (Not more than **150** words)

ಸಮಾಜವಾದಿ ಸಿದ್ಧಾಂತ ಮತ್ತು ಜಯಪ್ರಕಾಶ್ ನಾರಾಯಣ್ ಅವರ 'ಸಂಪೂರ್ಣ ಕ್ರಾಂತಿ'ಯ ಪರಿಕಲ್ಪನೆಯು ಭಾರತೀಯ ಸಮಾಜವನ್ನು ಪರಿವರ್ತಿಸುವ ಗುರಿಯನ್ನು ಹೇಗೆ ಹೊಂದಿತ್ತು ಎಂಬುದನ್ನು ಪರೀಕ್ಷಿಸಿ ಮತ್ತು ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಸುಧಾರಣೆಗಳ ಮೇಲೆ ಅದರ ಪ್ರಭಾವವನ್ನು ವಿಶ್ಲೇಷಿಸಿ. (**150** ಪದಗಳಿಗೆ ಮೀರದಂತೆ ಉತ್ತರಿಸಿ) *1*



www.shikarat.com

8. “Decentralization in India was intended to empower local governance, yet it has often led to political fragmentation and inefficiency.” Critically examine the paradox of decentralization with a focus on Panchayat Raj institutions. (Not more than **150** words)

“ಭಾರತದಲ್ಲಿ ವಿಕೇಂದ್ರೀಕರಣದ ಉದ್ದೇಶ ಸ್ಥಳೀಯ ಆಡಳಿತಗಳ ಬಲವರ್ಧನೆ ಆಗಿತ್ತು. ಆದರೆ ಅದು ಅನೇಕ ಸಲ ರಾಜಕೀಯ ವಿಘಟನೆ ಮತ್ತು ಅಸಮರ್ಥತೆ ದಾರಿಯಾಗಿದೆ.” ಪಂಚಾಯತ್ ರಾಜ್ ಸಂಸ್ಥೆಗಳನ್ನು ಗಮನದಲ್ಲಿರಿಸಿಕೊಂಡು ವಿಕೇಂದ್ರೀಕರಣದ ವಿರೋಧಾಭಾಸವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ. (**150** ಪದಗಳಿಗೆ ಮೀರದಂತೆ ಉತ್ತರಿಸಿ) *10*

9. Analyse the conflict between modernism and traditionalism in India. To what extent has modernism helped in combating social evils like fundamentalism, and caste discrimination, and whereas traditionalism continued to exert its influence ? (Not more than **250** words)

SHIKARAT.COM

ಭಾರತದಲ್ಲಿ ಆಧುನಿಕತೆ ಮತ್ತು ಸಾಂಪ್ರದಾಯಿಕತೆಗಳ ನಡುವಿನ ಸಂಘರ್ಷವನ್ನು ವಿಶ್ಲೇಷಿಸಿ. ಸಾಮಾಜಿಕ ಪಿಡುಗುಗಳಾದ ಮೂಲಭೂತವಾದ, ಮತ್ತು ಜಾತಿ ಅಸಮಾನತೆ ಇವುಗಳನ್ನು ಎದುರಿಸಲು ಆಧುನಿಕತೆಯು ಎಷ್ಟರ ಮಟ್ಟಿಗೆ ಸಹಕಾರಿಯಾಗಿದೆ ಹಾಗೂ ಇಂದಿಗೂ ಸಾಂಪ್ರದಾಯಿಕತೆಯು ಇನ್ನೂ ತನ್ನ ಪ್ರಭಾವ ಬೀರುವುದನ್ನು ಮುಂದುವರೆಸಿದೆಯೆ ? (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*

10. Discuss the impact of globalisation and westernisation on the lifestyles, values, and social roles of children and the elderly in India. How has this cultural shift affected family structures and traditional caregiving systems ? (Not more than **250** words)

ಭಾರತದಲ್ಲಿ ಮಕ್ಕಳು ಮತ್ತು ಹಿರಿಯರ ಜೀವನಶೈಲಿ, ಮೌಲ್ಯಗಳು ಮತ್ತು ಸಾಮಾಜಿಕ ಪಾತ್ರಗಳ ಮೇಲೆ ಜಾಗತೀಕರಣ ಮತ್ತು ಪಾಶ್ಚಿಮಾತ್ಯೀಕರಣದ ಪ್ರಭಾವವನ್ನು ಚರ್ಚಿಸಿ. ಈ ಸಾಂಸ್ಕೃತಿಕ ಬದಲಾವಣೆಯು ಕುಟುಂಬ ರಚನೆಗಳು ಮತ್ತು ಸಾಂಪ್ರದಾಯಿಕ ಆರೈಕೆ ವ್ಯವಸ್ಥೆಗಳ ಮೇಲೆ ಹೇಗೆ ಪರಿಣಾಮ ಬೀರಿದೆ ? (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*



www.shikarat.com

11. Explain the concept of social disorganisation and critically analyse its impact on marginalised communities in India. (Not more than **150** words)

ಸಾಮಾಜಿಕ ಅಸಂಘಟನೆಯ ಪರಿಕಲ್ಪನೆಯನ್ನು ವಿವರಿಸಿ ಮತ್ತು ಭಾರತದಲ್ಲಿ ಅಂಚಿನಲ್ಲಿರುವ ಸಮುದಾಯಗಳ ಮೇಲೆ ಅದರ ಪ್ರಭಾವವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ. (**150** ಪದಗಳಿಗೆ ಮೀರದಂತೆ ಉತ್ತರಿಸಿ) *10*

12. Discuss the socio-cultural structure of Indian villages. Explain how are these structures evolving in response to modernisation. (Not more than **250** words)

ಭಾರತೀಯ ಹಳ್ಳಿಗಳ ಸಾಮಾಜಿಕ-ಸಾಂಸ್ಕೃತಿಕ ರಚನೆಗಳನ್ನು ಚರ್ಚಿಸಿ. ಮತ್ತು ಆಧುನೀಕರಣಕ್ಕೆ ಅನುಗುಣವಾಗಿ ಅವು ಹೇಗೆ ವಿಕಸನಗೊಳ್ಳುತ್ತಿವೆ ವಿವರಿಸಿ ? (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*

13. Examine the institutional conflicts between the Legislature, Executive, and Judiciary in India. How have judicial activism and executive overreach impacted the balance of power in a democracy ? (Not more than **150** words)

ಭಾರತದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವಿನ ಸಾಂಸ್ಥಿಕ ಸಂಘರ್ಷಗಳನ್ನು ಪರಿಶೀಲಿಸಿ. ಪ್ರಜಾಪ್ರಭುತ್ವದಲ್ಲಿ ಅಧಿಕಾರದ ಸಮತೋಲನದ ಮೇಲೆ ನ್ಯಾಯಾಂಗದ ಕ್ರಿಯಾಶೀಲತೆ ಮತ್ತು ಕಾರ್ಯಾಂಗದ ಅತಿರೇಕವು ಹೇಗೆ ಪರಿಣಾಮ ಬೀರಿದೆ ? (**150** ಪದಗಳಿಗೆ ಮೀರದಂತೆ ಉತ್ತರಿಸಿ) *10*

14. Land reforms under Devaraj Urs were a landmark in Karnataka's agrarian history. Analyse the impact of these reforms on tenant farmers, landowners, and rural society. (Not more than **150** words)

ದೇವರಾಜ ಅರಸು ಅವರ ಭೂ ಸುಧಾರಣೆಗಳು ಕರ್ನಾಟಕದ ಕೃಷಿ ಇತಿಹಾಸದಲ್ಲಿ ಒಂದು ಹೆಗ್ಗುರುತಾಗಿದೆ. ಈ ಸುಧಾರಣೆಗಳು ಗೇಣಿದಾರ ರೈತರು, ಭೂಮಾಲೀಕರು ಮತ್ತು ಗ್ರಾಮೀಣ ಸಮಾಜದ ಮೇಲೆ ಬೀರಿದ ಪರಿಣಾಮವನ್ನು ವಿಶ್ಲೇಷಿಸಿ. (**150** ಪದಗಳಿಗೆ ಮೀರದಂತೆ ಉತ್ತರಿಸಿ) *10*



www.shikarat.com

15. Evaluate how the PDS (Public Distribution System) and food security programs help rural India in reducing malnutrition. (Not more than **250** words)
ಅಪೌಷ್ಟಿಕತೆಯನ್ನು ಕಡಿಮೆ ಮಾಡಲು ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಮತ್ತು ಆಹಾರ ಭದ್ರತಾ ಕಾರ್ಯಕ್ರಮಗಳು ಗ್ರಾಮೀಣ ಭಾರತದಲ್ಲಿ ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ಮೌಲ್ಯಮಾಪನ ಮಾಡಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*

16. Examine how common property resources like, ponds, forest, and grazing lands, affect the sustainability of rural life. (Not more than **250** words)
ಸಾಮಾನ್ಯ ಆಸ್ತಿ ಸಂಪನ್ಮೂಲಗಳಾದ ಕೆರೆಗಳು, ಅರಣ್ಯ ಮತ್ತು ಹುಲ್ಲುಗಾವಲುಗಳು ಗ್ರಾಮೀಣ ಜನಜೀವನದ ಸುಸ್ಥಿರತೆಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಪರಿಶೀಲಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*

17. Discuss how the Finance Commission's revenue-sharing formula has caused friction between Centre and State. Evaluate whether restructuring its role could promote cooperative federalism. (Not more than **250** words)
ಹಣಕಾಸು ಆಯೋಗದ ಆದಾಯ-ಹಂಚಿಕೆಯ ಸೂತ್ರ ಕೇಂದ್ರ ಮತ್ತು ರಾಜ್ಯಗಳ ನಡುವೆ ಘರ್ಷಣೆಗಳಿಗೆ ಹೇಗೆ ಕಾರಣವಾಗಿದೆ ಎಂದು ಚರ್ಚಿಸಿ. ಇದರ ಪಾತ್ರವನ್ನು ಪುನರ್ ರಚಿಸಿದಲ್ಲಿ ಸಹಕಾರಿ ಒಕ್ಕೂಟ ವ್ಯವಸ್ಥೆಯನ್ನು ಉತ್ತೇಜಿಸುವುದೇ ಎಂದು ಮೌಲ್ಯೀಕರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*



www.shikarat.com

**18.** Analyse the impact of Self-Help Groups (SHGs) and Microfinance Institutions (MFIs) in Karnataka on women's empowerment and financial inclusion. Discuss the measures taken by the Karnataka government to protect borrowers from exploitation by MFIs. (Not more than **250** words)

ಕರ್ನಾಟಕದಲ್ಲಿ ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಸೇರ್ಪಡೆ ಮೇಲೆ ಸ್ವ-ಸಹಾಯ ಗುಂಪುಗಳು ಮತ್ತು ಸೂಕ್ಷ್ಮ ಹಣಕಾಸು ಸಂಸ್ಥೆಗಳ ಪರಿಣಾಮವನ್ನು ವಿಶ್ಲೇಷಿಸಿ. ಹಾಗೂ ಸಾಲಗಾರರಿಗೆ ಸೂಕ್ಷ್ಮ ಹಣಕಾಸು ಸಂಸ್ಥೆಗಳ ಶೋಷಣೆಯಿಂದ ರಕ್ಷಿಸಲು ಕರ್ನಾಟಕ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಚರ್ಚಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) *15*

**19.** The frequency distributions of serum nicotine levels of smokers and non-smokers is given below :

| Nicotine Level (mg/m*l*) | Smokers | Non-smokers |
|---|---|---|
| 0 – 13 | 78 | 3800 |
| 14 – 49 | 183 | 97 |
| 50 – 99 | 142 | 50 |
| 100 – 149 | 200 | 18 |
| 150 – 199 | 176 | 7 |
| 200 – 249 | 170 | 8 |
| 250 – 299 | 151 | 9 |
| 300+ | 200 | 11 |
| Total | 1300 | 4000 |

Answer the following based on above data :

(a) Is it fair to compare Nicotine level distributions for smokers and non-smokers using absolute frequencies ? Why or why not ?

(b) Construct a line graph for smokers and non-smokers using above data.

(c) What is your interpretation about the distribution of recorded nicotine levels in each group ?



www.shikarat.com

ಧೂಮಪಾನಿಗಳು ಮತ್ತು ಧೂಮಪಾನ ಮಾಡದಿರುವವರಲ್ಲಿ ಸೀರಮ್ ನಿಕೋಟಿನ್ ಮಟ್ಟಗಳ ಆವರ್ತನ ವಿತರಣೆಯನ್ನು ಕೆಳಗೆ ನೀಡಲಾಗಿದೆ : *2+5+3=10*

| ನಿಕೋಟಿನ್ ಮಟ್ಟ (mg/m*l*) | ಧೂಮಪಾನಿಗಳು | ಧೂಮಪಾನ ಮಾಡದಿರುವವರು |
|---|---|---|
| 0 – 13 | 78 | 3800 |
| 14 – 49 | 183 | 97 |
| 50 – 99 | 142 | 50 |
| 100 – 149 | 200 | 18 |
| 150 – 199 | 176 | 7 |
| 200 – 249 | 170 | 8 |
| 250 – 299 | 151 | 9 |
| 300+ | 200 | 11 |
| Total | 1300 | 4000 |

ಮೇಲಿನ ಮಾಹಿತಿ (ಡೇಟಾದ) ಆಧಾರದ ಮೇಲೆ ಈ ಕೆಳಗಿನವುಗಳಿಗೆ ಉತ್ತರಿಸಿ :

(a) ನಿಕೋಟಿನ್ ಮಟ್ಟದ ಸಂಪೂರ್ಣ ಆವರ್ತದ ವಿವರಣೆ ಬಳಸಿಕೊಂಡು ಧೂಮಪಾನಿಗಳು ಮತ್ತು ಧೂಮಪಾನಿಗಳಿಲ್ಲದವರ ವಿತರಣೆಯನ್ನು ಹೋಲಿಸುವುದು ನ್ಯಾಯವೇ ?

(b) ಧೂಮಪಾನಿಗಳು ಹಾಗೂ ಧೂಮಪಾನ ಮಾಡದಿರುವವರನ್ನು ಕುರಿತಾಗಿ ಲೈನ್ ಗ್ರಾಫ್ ಅನ್ನು ಮೇಲಿನ ಮಾಹಿತಿಯನ್ನು ಉಪಯೋಗಿಸಿಕೊಂಡು ರಚಿಸಿ.


(c) ಮೇಲಿನ ಎರಡು ಗುಂಪಿನಲ್ಲಿ ದಾಖಲಾದ ನಿಕೋಟಿನ್ ಮಟ್ಟದ ಬಗ್ಗೆ ನಿಮ್ಮ ವ್ಯಾಖ್ಯಾನವನ್ನು ದಾಖಲಿಸಿ.




www.shikarat.com

**20.** A survey was conducted in two Talukas and charts were prepared based on the stages of cancer in Taluka 1 and Taluka 2. In Taluka 1, about 1,000 cancer patients were found, while Taluka 2 had 7% fewer total Cancer patients than Taluka 1.

**Taluka 1**




**Taluka 2**




Answer the questions below :


(a) Calculate the Stage III and Stage IV cancer patients in Taluka 2 and compare with early cancer patients (Stage I and Stage II) of Taluka 2. Write the interpretation of the result.

(b) Compare the Stage IV cancer patients cases between Taluka 1 and Taluka 2.


(c) Compare the early stage cancer patient cases (Stage I and Stage II) between Taluka 1 and Taluka 2. Write the interpretation.

ಎರಡು ಪ್ರತ್ಯೇಕ ತಾಲ್ಲೂಕು ಗಳಲ್ಲಿ ಕ್ಯಾನ್ಸರಿನ ವಿವಿಧ ಹಂತಗಳ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಿ ಎರಡು ತಾಲ್ಲೂಕುಗಳ ಕುರಿತು ಪೈಚಾರ್ಟ ಅನ್ನು ಸಿದ್ಧಪಡಿಸಲಾಗಿದೆ. ತಾಲ್ಲೂಕ 1ರಲ್ಲಿ ಸುಮಾರು 1,000 ಕ್ಯಾನ್ಸರ್ ರೋಗಿಗಳು ಕಂಡು ಬಂದಿದ್ದು ತಾಲ್ಲೂಕ 2 ರಲ್ಲಿ ತಾಲ್ಲೂಕು 1ಕ್ಕೆ ಹೋಲಿಸಿದರೆ ಶೇಕಡ 7% ರಷ್ಟು ಒಟ್ಟು ಕ್ಯಾನ್ಸರ್ ಪ್ರಕರಣದಲ್ಲಿ ಕಡಿಮೆ ಇರುವುದು ಗಮನಕ್ಕೆ ಬಂದಿದೆ. ಹಾಗಾದರೆ.

**ತಾಲ್ಲೂಕು 1**




**ತಾಲ್ಲೂಕು 2**




ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

(a) ತಾಲ್ಲೂಕು 2 ರಲ್ಲಿ III ಹಾಗೂ IV ನೇ ಹಂತದ ಕ್ಯಾನ್ಸರ್ ರೋಗಿಗಳ ಪ್ರಮಾಣವನ್ನು Iನೇ ಹಾಗೂ IIನೇ ಹಂತದ ಕ್ಯಾನ್ಸರ್ ರೋಗಿಗಳ ಪ್ರಮಾಣಕ್ಕೆ ಹೋಲಿಸಿ ತಮ್ಮ ಅಭಿಪ್ರಾಯವನ್ನು ದಾಖಲಿಸಿ.

(b) ತಾಲ್ಲೂಕು 1 ಮತ್ತು ತಾಲ್ಲೂಕು 2 ರ ನಡುವಿನ IV ನೇ ಹಂತದ ಕ್ಯಾನ್ಸರ್ ರೋಗಿಗಳ ಪ್ರಕರಣಗಳನ್ನು ಹೋಲಿಸಿ.

(c) ತಾಲ್ಲೂಕು 1 ಮತ್ತು ತಾಲ್ಲೂಕು 2 ರ ನಡುವಿನ ಆರಂಭಿಕ ಹಂತದ ಕ್ಯಾನ್ಸರ್ ರೋಗಿಗಳ ಪ್ರಕರಣಗಳನ್ನು (ಹಂತ I ಮತ್ತು ಹಂತ II) ಹೋಲಿಸಿ. ವ್ಯಾಖ್ಯಾನವನ್ನು ಬರೆಯಿರಿ. *4+2+4*



www.shikarat.com